ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ: DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER :
ದಿನಾಂಕ : DATE : 10/04/2019

# ನಿಯಮ ಉಲ್ಲಂಘಿಸಿ ಜ್ಯೇಷ್ಠತಾ ಪಟ್ಟಿ ರಚನೆ

## ವಿವಾದಕ್ಕೆ ಕಾರಣವಾದ ಪ.ಪೂ. ಇಲಾಖೆ ನಡೆ । ಪ್ರಕರಣ ಇತ್ಯರ್ಥ ಮುನ್ನವೇ ತಯಾರು

ದೇವರಾಜ್ ಎಲ್ ಬೆಂಗಳೂರು

ಮುಂಬಡ್ತಿ- ಹಿಂಬಡ್ತಿ ಪ್ರಕರಣ ಇತ್ಯರ್ಥವಾಗುವ ಮೊದಲೇ ತರಾತುರಿಯಲ್ಲಿ ಜ್ಯೇಷ್ಠತಾ ಪಟ್ಟಿ ರೂಪಿಸುವ ಮೂಲಕ ಪದವಿ ಪೂರ್ವ ಶಿಕ್ಷಣ ಇಲಾಖೆ ಹೊಸ ವಿವಾದ ಸೃಷ್ಟಿಸಿದೆ.

**» ನಿರ್ದೇಶಕರ ಗಮನಕ್ಕೆ ತಾರದೆ ಜಂಟಿ ನಿರ್ದೇಶಕರ ಹಂತದಲ್ಲೇ ರಚನೆ**

ಪದಪಿ ಪೂರ್ವ ಶಿಕ್ಷಣ ಇಲಾಖೆಯು ಬೋಧಕ ಮತ್ತು ಬೋಧಕೇತರ ನೌಕರರ ಜೇಷ್ಠತಾ ಪಟ್ಟಿ ರಚಿಸಿದೆ. ಬಿ.ಕೆ. ಪವಿತ್ರ ಅವರ ಪ್ರಕರಣ ಕೋರ್ಟ್‌ನಲ್ಲಿ ಬಾಕಿ ಇರುವಾಗಲೇ ಬಡ್ತಿ ವಿಚಾರವಾಗಿ ಮುಂದುವರಿಯಲು ಶಿಕ್ಷಣ ಇಲಾಖೆ ಪಟ್ಟಿ ರಚಿಸಿರುವುದು ನ್ಯಾಯಾಂಗ ನಿಂದನೆಯಾಗಿದೆ. ತರಾತುರಿಯಲ್ಲಿ ಪಟ್ಟಿ ತಯಾರಿಸಲು ಜಂಟಿ ನಿರ್ದೇಶಕರು (ಆಡಳಿತ) ಮತ್ತು ಉಪನಿರ್ದೇಶಕರೇ (ಆಡಳಿತ) ಸೇರಿ ಸಮಿತಿ ರಚಿಸಿಕೊಂಡಿದ್ದಾರೆ. ಈ ಸಮಿತಿ ಇತ್ತೀಚೆಗೆ ಸಭೆ ನಡೆಸಿ 22 ಜನರ ಜ್ಯೇಷ್ಠತಾ ಪಟ್ಟಿ ತಯಾರಿಸಿದೆ. ಈ ಎಲ್ಲ ಕಾರ್ಯಗಳು ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರ ಹಂತದಲ್ಲೇ ನಡೆದುಹೋಗಿದೆ. ಇಲಾಖೆ ನಿರ್ದೇಶಕ ಪಿ.ಸಿ. ಜಾಫರ್ ಗಮನಕ್ಕೆ ತಾರದೆ ನಿರ್ದೇಶಕರ



ಮೌಖಿಕ ಆದೇಶದ ಮೇರೆಗೆ ಎಂದು ಹೇಳಿ ಜ್ಯೇಷ್ಠತಾ ಪಟ್ಟಿ ರೂಪಿಸಿದ್ದಾರೆ.

ಪ್ರಾಂಶುಪಾಲ, ಉಪನಿರ್ದೇಶಕರ ಹಾಗೂ ಜಂಟಿ ನಿರ್ದೇಶಕರ ವೃಂದದ ಜೇಷ್ಠತೆಯಲ್ಲಿ ನಾಲ್ವರು, ಉಪನ್ಯಾಸಕರ ವೃಂದದ ಜ್ಯೇಷ್ಠತೆಯಲ್ಲಿ ಆರು, ಬೋಧಕೇತರ ಸಿಬ್ಬಂದಿ ವೃಂದದ ಜ್ಯೇಷ್ಠತೆಯಲ್ಲಿ (ಸಿ ಮತ್ತು ಡಿ ಗ್ರೂಪ್ ನೌಕರರು) ಐವರು, ಅಧಿಕಾರಿ ಸಿಬ್ಬಂದಿ ವಿಭಾಗದಲ್ಲಿ 11 ಜನರು ಸೇರಿ ಒಟ್ಟು 22 ಅಧಿಕಾರಿಗಳ ಜ್ಯೇಷ್ಠತಾ ಪಟ್ಟಿ ರೂಪಿಸಿದೆ.

ಈ ಪಟ್ಟಿಯಲ್ಲಿರುವವರಿಗೆ ಹಿಂಬಡ್ತಿ ನೀಡಲಾಗಿರುವುದರಿಂದ ಮುಂಬಡ್ತಿ ನೀಡಲು ಕೆಲ ಅಧಿಕಾರಿಗಳು ಲಂಚ ಪಡೆದು ಈ ಕೃತ್ಯಕ್ಕೆ ಮುಂದಾಗಿದ್ದಾರೆಂಬ ಆರೋಪ ಕೇಳಿಬಂದಿದೆ. ರಾಜ್ಯದ ಯಾವುದೇ ಇಲಾಖೆಗಳು ಈ ವಿಚಾರವಾಗಿ ಕೈ ಹಾಕದಿದ್ದರೂ ಪ.ಪೂ. ಇಲಾಖೆ ಮಾತ್ರ ಮುಂದಾಗಿರುವುದು ಅನುಮಾನಕ್ಕೆ ಕಾರಣವಾಗಿದೆ.

**ನಿಯಮ ಉಲ್ಲಂಘನೆ:** ಬಿ.ಕೆ. ಪವಿತ್ರಾ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ನೀಡಿರುವ ತೀರ್ಪಿನನ್ವಯ ವೃಂದದ ಪರಿಷ್ಕೃತ ಜ್ಯೇಷ್ಠತಾ ಪಟ್ಟಿಗಳಿಗೆ ಸಂಬಂಧಿಸಿದಂತೆ ಸ್ವೀಕೃತವಾಗಿರುವ ಮನವಿ ಮತ್ತು ಆಕ್ಷೇಪಣೆ ಪರಿಶೀಲಿಸಿ ಇತ್ಯರ್ಥಪಡಿಸಲು ಸರ್ಕಾರ ಪ್ರತ್ಯೇಕ ತಜ್ಞರ ಸಮಿತಿ ರಚಿಸಿದೆ. ಸರ್ಕಾರದ ವಿಶೇಷ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವರು ಸಮಿತಿಯಲ್ಲಿದ್ದಾರೆ. ಅಧಿಕಾರ ಪರಿಷ್ಕೃತ ಅಂತಿಮ ಜ್ಯೇಷ್ಠತಾ ಪಟ್ಟಿಗಳಿಗೆ ಸಂಬಂಧಿಸಿದಂತೆ ಸ್ವೀಕೃತವಾದ ಮನವಿಗಳನ್ನು ಆಯಾ ಇಲಾಖೆಯು ಅಪರ ಮುಖ್ಯ ಕಾರ್ಯದರ್ಶಿ ಮನವಿಗಳಲ್ಲಿನ ಅಂಶಗಳಿಗೆ ಟಿಪ್ಪಣಿ ಬರೆದು ಪೂರಕ ದಾಖಲೆಗಳೊಂದಿಗೆ ಸಮಾಲೋಚಕರ ಸಮಿತಿಗೆ ಸಲ್ಲಿಸಬೇಕಿದೆ. ಈ ಸಮಿತಿ ನಿಯಮಾನುಸಾರ ಪರಿಶೀಲಿಸಿ ಆಡಳಿತ ಸುಧಾರಣೆ ಇಲಾಖೆಗೆ ಕಳಿಹಿಸಬೇಕೆಂದು ಸ್ಪಷ್ಟವಾಗಿ ಹೇಳಿದೆ. ಆದರೆ, ಪ.ಪೂ. ಇಲಾಖೆಯು ಸಮಿತಿ ಗಮನಕ್ಕೆ ತಾರದೆ ಪಟ್ಟಿ ರಚಿಸಿದೆ.

### ನ್ಯಾಯಾಂಗ ನಿಂದನೆ

ಮುಂಬಡ್ತಿ ಮತ್ತು ಹಿಂಬಡ್ತಿ ವಿಚಾರ ಸುಪ್ರೀಂ ಕೋರ್ಟ್‌ನಲ್ಲಿ ಇತ್ಯರ್ಥವಾಗದಿರುವುದರಿಂದ ಈ ಸಮಯದಲ್ಲಿ ಬಡ್ತಿ ವಿಚಾರವಾಗಿ ಯಾವುದೇ ಆದೇಶಗಳನ್ನು ಮಾಡುವಂತಿಲ್ಲ. ಈ ರೀತಿ ಮಾಡಿದರೆ ಅದು ನ್ಯಾಯಾಂಗ ನಿಂದನೆಯಾಗಲಿದೆ. ಇದ್ಯಾವುದನ್ನು ಲೆಕ್ಕಿಸದೆ ಇಲಾಖೆ ಜ್ಯೇಷ್ಠತಾ ಪಟ್ಟಿ ರಚಿಸಿದೆ.



ನಾನು ಸೇವಾ ಹಿರಿತನ ವಿಚಾರವಾಗಿ ಪರಿಶೀಲಿಸಲು ಹೇಳಿದ್ದೇನೆ ಹೊರತು ಜ್ಯೇಷ್ಠತಾ ಪಟ್ಟಿ ರೂಪಿಸಲು ಹೇಳಿಲ್ಲ. ನಾನು ಅಧಿಕಾರಿಗಳ ಜತೆ ಚರ್ಚಿಸುತ್ತೇನೆ.

। ಪಿ.ಸಿ. ಜಾಫರ್
ಪದವಿ ಪೂರ್ವ ಇಲಾಖೆ ನಿಕಟಪೂರ್ವ ನಿರ್ದೇಶಕ